

# ಮಲ್ಟಿಮೀಡಿಯಾ ಪದವಿಯಿಂದ ಅಪರಿಮಿತ ಅವಕಾಶ



ಉದ್ಯೋಗ ಗಳಿಗೆ ಯುವ ಸಮುದಾಯದ ಅತ್ಯಂತ ಪ್ರಮುಖ ಆದ್ಯತೆಯಲ್ಲಿ ಒಂದಾಗಿ ಪರಿಣಮಿಸಿದ್ದು, ಸೂಕ್ತ ಆಯ್ಕೆಯಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಶಕ್ತಿಮೀರಿ ಶ್ರಮಿಸುತ್ತಿರುವುದನ್ನು ಕಾಣುತ್ತೇವೆ.

ಪ್ರಸ್ತುತ ಜಾಗತಿಕ ಸ್ಪರ್ಧೆಯ ಜತೆ ಸಾಕಷ್ಟು ವಿಧದ ಒತ್ತಡವೂ ಹೆಚ್ಚಾಗಿರುವ ಸಂದರ್ಭದಲ್ಲಿ ಔದ್ಯೋಗಿಕ ಕ್ಷೇತ್ರದಲ್ಲಿ ತಮ್ಮದೇ ಆದ ಸ್ಥಾನ ಕಲ್ಪಿಸಿಕೊಳ್ಳಲು ಮುಂದಾದವರಿಗೆ ಕ್ರಿಯಾತ್ಮಕವಾದ, ಹೇರಳ ಉದ್ಯೋಗಾವಕಾಶ ಹೊಂದಿರುವ, ಯಾವುದೇ ಹುದ್ದೆಗೂ ಕಡಿಮೆ ಎನಿಸದ ಗೌರವಯುತವಾದ ಕಾರ್ಯಕ್ಷೇತ್ರ ಒಳಗೊಂಡಿರುವ ಮಲ್ಟಿಮೀಡಿಯಾ ಉತ್ತಮ ಆಯ್ಕೆ.

ಮಲ್ಟಿಮೀಡಿಯಾ ವಿಶೇಷ ಅನುಭವ, ತರಬೇತಿ ಅಥವಾ ಕಲಿಕೆಯಲ್ಲ. ಬದಲಾಗಿ ಈಗಿರುವ ಮುದ್ರಣ ಮಾಧ್ಯಮ, ದೃಶ್ಯ ಮಾಧ್ಯಮ, ವೆಬ್ ಮಾಧ್ಯಮ ಇತ್ಯಾದಿ ಸಂವಹನ ಮಾಧ್ಯಮಗಳ ಮಾದರಿಯದ್ದೇ ಆಗಿದೆ. ಚಲನಚಿತ್ರ, ಟಿವಿ, ಗೇಮ್‌ಗಳು, ಜಾಹೀರಾತು, ಪ್ಯಾಕೇಜಿಂಗ್ ಕೈಗಾರಿಕೆಗಳು, ವಿನ್ಯಾಸ, ವೆಬ್‌ಕ್ಷೇತ್ರ, ವಾಸ್ತುಶಿಲ್ಪ, ಆಟೊಮೊಬೈಲ್ ವಿನ್ಯಾಸ, ಕಾರ್ಪೋರೇಟ್ ಪ್ರಸ್ತುತಿ ಸೇರಿದಂತೆ ಹಲವು ಕ್ಷೇತ್ರಗಳಿಗೆ ಅನಿವಾರ್ಯವಾಗಿದೆ. ಇಂದು ಮಲ್ಟಿಮೀಡಿಯಾ ಅಪ್ಲಿಕೇಷನ್‌ಗಳ ಬಳಕೆ ಪ್ರತಿಯೊಂದು ಉದ್ಯಮಕ್ಕೂ ಅಗತ್ಯವಾಗಿದ್ದು, ಇದರ ಅನುಪಸ್ಥಿತಿಯಲ್ಲಿ ಕಾರ್ಯನಿರ್ವಹಣೆಯನ್ನು ಊಹಿಸಲು ಕೂಡ ಸಾಧ್ಯವಿಲ್ಲ.

ಮಲ್ಟಿಮೀಡಿಯಾ ಕೂಡ ಇತರೆ ಶಿಕ್ಷಣ ಪಠ್ಯಕ್ರಮದ ರೂಪದಲ್ಲಿಯೇ ಇದೆ. ನೀತಿ, ನಿಯಮಗಳು, ಕಟ್ಟಳೆಗಳು, ನಿರ್ಬಂಧಗಳು ಕೂಡ ಅತ್ಯಂತ ಕಡಿಮೆ. ಆಸಕ್ತಿ ಹಾಗೂ ಒಂದಿಷ್ಟು ಕ್ರಿಯಾಶೀಲತೆ ಇದ್ದುಬಿಟ್ಟರೆ ಮಹಾ ಸಾಧಕರಾಗಿ ಸಮಾಜದಲ್ಲಿ ಗುರುತಿಸಿಕೊಳ್ಳುವ ಅವಕಾಶವನ್ನು ಇದು ಒದಗಿಸುತ್ತದೆ.

ಈ ಕಲಿಕೆಯನ್ನು ಎಂಜಿನಿಯರ್, ವೈದ್ಯ, ವಕೀಲ, ಚಾರ್ಟ್‌ರ್ಡ್ ಅಕೌಂಟಂಟ್ ಕ್ಷೇತ್ರಗಳಲ್ಲದ, ಅದಕ್ಕೆ ಸರಿಸಮನಾದ ಆದಾಯ ಗಳಿಸುವ ಅವಕಾಶ ಬಯಸುವವರು, ತರಗತಿಯಲ್ಲಿ ಪೂರ್ಣ ಸಮಯ ಕುಳಿತು ಕಲಿಯಲಾಗದವರು, ಕ್ರಿಯಾತ್ಮಕ ಕ್ಷೇತ್ರದಲ್ಲಿ ತಮ್ಮ ಭವಿಷ್ಯ ಅರಸುವವರು, ಕಲೆಯ ಆರಾಧಕರು, ಭವಿಷ್ಯದ ನಿಲುವಿನಲ್ಲಿ ದ್ವಂದ್ವತೆ ಉಳ್ಳವರು ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದವರು, ಅನುತ್ತೀರ್ಣರಾದವರು ಅಥವಾ ಎಲ್ಲಕ್ಕಿಂತ ಮುಖ್ಯವಾಗಿ ಮಾದರಿಯ ಉದ್ಯೋಗ ಕಂಡುಕೊಳ್ಳುವ ಹಂಬಲ ಹೊತ್ತವರಿಗೆ ಸೂಕ್ತ.

## ವಿಶೇಷ ಪರಿಣಿತಿ :

ಮಲ್ಟಿಮೀಡಿಯಾ ಒಂದು ವಿಶೇಷ ನೈಪುಣ್ಯತೆ ಒದಗಿಸುತ್ತದೆ. ಇದನ್ನು ಮೂರು ವರ್ಷದ ಪದವಿ ಅಥವಾ ಎರಡು ವರ್ಷದ ಸ್ನಾತಕೋತ್ತರ ತರಬೇತಿ ಮೂಲಕ ಹೊಂದಬಹುದಾಗಿದೆ. ತರಬೇತಿ ಪೂರ್ಣಗೊಳ್ಳುವ ಮುನ್ನ ಉದ್ಯೋಗವೂ ಕಾದಿರುತ್ತದೆ. ಕಲಿಕೆಯ ಪ್ರವೇಶವೇ ಉದ್ಯೋಗ ಗಳಿಕೆಯ ಮಾರ್ಗವೂ ಆಗಿರುವ ಅಪರೂಪದ ತರಬೇತಿ ಇದು. ಪ್ರತಿಯೊಬ್ಬರೂ ತಮ್ಮದೇ ಆದ ಕ್ರಿಯಾಶೀಲತೆ ಹೊಂದಿರುತ್ತಾರೆ. ಹೀಗಾಗಿ ಈ ಉದ್ಯಮದತ್ತ ಒಮ್ಮೆ ಆಕರ್ಷಿತರಾದರೆ ಸಾಕು, ಭವಿಷ್ಯ ಉಜ್ವಲವಾಗಲಿದೆ.

animation

GraPHIC Design

PHOTOGRaPHY

FILM maKING

weB Design

VFX



WIZTOONZ
college of media & design

www.wiztoonz.com

**BACHELOR**
MULTIMEDIA TECHNOLOGIES
*Eligibility: Plus 2 in any stream*

**MASTER**
MULTIMEDIA TECHNOLOGIES
*Eligibility: Degree in any stream*

**DIPLOMA**
MULTIMEDIA TECHNOLOGIES
*Eligibility: Plus 2 ( Fail )*

**ADVANCED DIPLOMA**
MULTIMEDIA TECHNOLOGIES
*Eligibility: Degree ( Fail )*

**BACHELOR**
MULTIMEDIA TECHNOLOGIES WITH BPP ( BACHELOR PREPARATORY PROGRAM )
*Eligibility: SSLC (Fail ), Age: 17+*

VISIT OUR CAMPUS AT,
WIZTOONZ COLLEGE OF MEDIA & DESIGN
3rd Phase,
JP Nagar,
Bangalore.

one degree many careers

## ಎಲ್ಲ ತರಗತಿಯಂತೇ :

ಇದು ಇತರೆ ಎಲ್ಲಾ ಕಲಿಕಾ ಕ್ಷೇತ್ರಗಳ ಮಾದರಿಯಲ್ಲೇ ನಡೆಯುತ್ತದೆ. ಕಲಿಕೆಗಿಂತ ಪ್ರಾಯೋಗಿಕ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಧಾನ್ಯ. ಇದು ಕ್ಷೇತ್ರ ಅಧ್ಯಯನ, ಪ್ರಾಜೆಕ್ಟ್‌ಗಳು, ಅಸೈನ್‌ಮೆಂಟ್‌ಗಳು, ಇಂಟರ್ನ್‌ಶಿಪ್ ಇತ್ಯಾದಿಗಳನ್ನೂ ಒಳಗೊಂಡಿರುತ್ತದೆ. ಪದವಿ, ಡಿಪ್ಲೋಮಾ ಹಾಗೂ ಸ್ನಾತಕೋತ್ತರ ತರಬೇತಿಗಳು ಒಂದು ತೂಕವುಳ್ಳದ್ದಾಗಿರ ಬೇಕಾದ್ದು ಅನಿವಾರ್ಯ. ಇದು ಯಾವುದೇ ಉದ್ಯೋಗ ಗಳಿಕೆಯ ಮಾರ್ಗದ ಅತ್ಯಂತ ಆರಂಭಿಕ ಅಗತ್ಯಗಳಲ್ಲಿ ಒಂದಾಗಿದೆ. ಇದಲ್ಲದೇ ಸರ್ಕಾರಿ ನೌಕರಿ, ಹೆಚ್ಚಿನ ವ್ಯಾಸಂಗಕ್ಕಾಗಿ ವಿದೇಶಕ್ಕೆ ತೆರಳುವ ಹಂಬಲ ಇದ್ದರೆ ಅದಕ್ಕೆ ಒಂದು ದೃಢೀಕೃತ ಸಂಸ್ಥೆಯಿಂದ ಪಡೆಯುವ ಪದವಿ. ಡಿಪ್ಲೋಮಾ ಹಾಗೂ ಸ್ನಾತಕೋತ್ತರ ತರಬೇತಿಯ ಪ್ರಮಾಣಪತ್ರ ಅವಶ್ಯಕ. ಹೀಗಾಗಿ ಈ ವಿಷಯದಲ್ಲಿ ಮಲ್ಟಿಮೀಡಿಯಾ ಕೂಡ ಹೊರತಾಗಿಲ್ಲ.

## ಮಹಾನಗರ ಸೂಕ್ತ :

ಬೆಂಗಳೂರಿನಂದ ಮೆಟ್ರೊ ನಗರಗಳಲ್ಲಿ ಭವಿಷ್ಯದ ಉದ್ಯೋಗಾವಕಾಶಗಳು ಸಿಗುವ ಸಾಧ್ಯತೆ ಹೆಚ್ಚಿರುತ್ತದೆ. ಇದರಿಂದ ಈ ಕ್ಷೇತ್ರದಲ್ಲಿ ಉಜ್ವಲ ಭವಿಷ್ಯ ಕಂಡುಕೊಳ್ಳುವ ಉದ್ದೇಶ ಹೊಂದಿರುವವರು ಉದ್ಯಮವು ಪ್ರಗತಿಯಲ್ಲಿರುವ ಹಾಗೂ ವಿಶೇಷ ಕೇಂದ್ರಿತವಾಗಿರುವ ಬೆಂಗಳೂರಿನಂತಹ ನಗರದತ್ತ ಬರುವುದು ಅನಿವಾರ್ಯ.

## ಅವಕಾಶ ಬಯಸಿ ಇಲ್ಲಿ ಬನ್ನಿ :

ಕಲಿಕೆ ಪಡೆಯಬೇಕೆನ್ನುವುದು ನಿಜ. ಸಾಕಷ್ಟು ಆಯ್ಕೆಗಳು ಮಹಾನಗರದಲ್ಲಿರುವಾಗ ಎಲ್ಲಿ ಕಲಿಯುವುದು ಎನ್ನುವ ಜಿಜ್ಞಾಸೆ ಮೂಡುತ್ತದೆ. ಆಗ ವಿಜ್‌ಟೂನ್ಜ್‌ನತ್ತ ಹೆಜ್ಜೆ ಇಡಬಹುದು. ಕಲಿಯುವ ಹಸಿವುಳ್ಳವರಿಗೆ ವಿಜ್‌ಟೂನ್ಜ್ ಕಾಲೇಜ್ ಆಫ್ ಮೀಡಿಯಾ ಅಂಡ್ ಡಿಸೈನ್ ಪ್ರಶಸ್ತ. ಇದನ್ನು ಸಾಬೀತು ಪಡಿಸುವ ರೀತಿಯಲ್ಲಿ ಸಂಸ್ಥೆಯು ರಾಜ್ಯಕ್ಕೇ ಮಾದರಿ ಎನಿಸುವ ಮೂಲಭೂತ ಸೌಕರ್ಯ, ಉದ್ಯಮದ ಪ್ರಗತಿಯನ್ನು ಅರಿತ ತಜ್ಞ ಹಾಗೂ ಅನುಭವಿ ನುರಿತ ಶಿಕ್ಷಕರು, ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸಂದರ್ಶನ ಮೂಲಕ ಉದ್ಯೋಗ ಗಳಿಸಲು ಸಹಕಾರಿಯಾಗುವ ಮಾದರಿಯ ವಿಶೇಷ ಪ್ಲೇಸ್‌ಮೆಂಟ್ ಸೆಲ್, ವಿದ್ಯಾರ್ಥಿಗಳು-ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕ ಹಾಸ್ಟೆಲ್ ಹಾಗೂ ಪೇಯಿಂಗ್‌ಗೆಸ್ಟ್ ಸೌಲಭ್ಯ, ಮಕ್ಕಳಿಗೆ ಉದ್ಯಮದ ಸೂಕ್ಷ್ಮ ನೈಪುಣ್ಯತೆ, ಸಂವಹನೆ, ಹೊಂದಾಣಿಕೆ, ಇಂಗ್ಲಿಷ್ ಮಾತನಾಡುವ ತರಬೇತಿ ಇತ್ಯಾದಿ ಉದ್ಯಮಕ್ಕೆ ಬೇಕಿರುವ ಕೌಶಲ್ಯವನ್ನು ರೂಢಿಸುವ ಕಾರ್ಯವನ್ನು ಕಾಲೇಜಿನಲ್ಲೇ ಮಾಡಲಾಗುತ್ತದೆ. ಕಲಿಕಾ ಸಂದರ್ಭದಲ್ಲೇ ನಾನಾ ಕಂಪನಿಗಳಲ್ಲಿ ವೇತನ ಸಹಿತ ಇಂಟರ್ನ್‌ಶಿಪ್ ಮಾಡುವ ಅವಕಾಶ ಕಲ್ಪಿಸಲಾಗುತ್ತದೆ. ಇಲ್ಲಿ ಪದವಿ ಕಲಿಯುವವರು ಯುಜಿಸಿಯಿಂದ ಮಾನ್ಯತೆಯಾದ ವಿಶ್ವವಿದ್ಯಾಲಯದಿಂದ ಎಲ್ಲಾ ಪದವಿ, ಡಿಪ್ಲೋಮಾ ಹಾಗೂ ಸ್ನಾತಕೋತ್ತರ ತರಬೇತಿ ನೀಡಲಾಗುತ್ತಿದೆ. ಅತ್ಯುತ್ತಮ ಭವಿಷ್ಯವನ್ನು ರೂಪಿಸಿಕೊಳ್ಳುವ ವಿಷಯದಲ್ಲಿ ನೀವು ಗಂಭೀರವಾಗಿದ್ದರೆ ಇಂದು ಒಂದಿಷ್ಟು ಹೂಡಿಕೆ ಹಾಗೂ ಒಂದಿಷ್ಟು ತ್ಯಾಗ ಮಾಡಲು ಸಿದ್ಧರಾಗಲೇಬೇಕು. ಕೊಂಚ ಹೊಂದಾಣಿಕೆ ಮಾಡಿಕೊಂಡರೆ ನಿಮ್ಮ ಭವಿಷ್ಯದಲ್ಲಿ ಮುಂದೆಂದೂ ಹೊಂದಾಣಿಕೆ ಮಾಡಿಕೊಳ್ಳುವ ಅಗತ್ಯ ಎದುರಾಗದು.





**For Admissions Contact: 99166 45608, 99166 45682, 99166 04560, 99166 45614.**